**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

ಸಂಖ್ಯೆ: ಉಕ್ಕನಿ/ಕೃಭಾ/ಕೃಷಿ ಹೊಂಡ ಟೆಂಡರ್/2/2014-15

ಕೃಷಿ ನಿರ್ದೇಶನಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ: 18-12-2014.

**ಸುತ್ತೋಲೆ-8**

**ವಿಷಯ: ಕೃಷಿ ಭಾಗ್ಯ ಯೋಜನೆಯ ಮಳೆ ನೀರು ಸಂಗ್ರಹಣೆ ಮತ್ತು ಉಪಯುಕ್ತ ಬಳಕೆ ಪ್ಯಾಕೇಜ್‌ನ ಅನುಷ್ಠಾನದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು:**

***

**ಕೃಷಿ ಭಾಗ್ಯ ಯೋಜನೆಯಡಿ ಪ್ರಮುಖ ಘಟಕವಾಗಿರುವ ಮಳೆನೀರು ಸಂಗ್ರಹಣೆ ಮತ್ತು ಉಪಯುಕ್ತತೆ ಬಳಕೆ ಪ್ಯಾಕೇಜ್‌ನ ಅನುಷ್ಠಾನದಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ತಿಳಿಸಲಾಗಿದೆ.**

1. ಕೃಷಿಹೊಂಡ (ಪೈಪ್ ಇನ್‌ಲೆಟ್- ಔಟ್‌ಲೆಟ್ ಹಾಗೂ ಸಿಲ್ಟ್ ಟ್ರಾಪ್ ಯೊಂದಿಗೆ) ನಿರ್ಮಾಣದ ವಿನ್ಯಾಸಗಳನ್ನು ಈಗಾಗಲೇ ಜಿಲ್ಲೆಗಳಿಗೆ ಕಳುಹಿಸಲಾಗಿದೆ. ಕೃಷಿಹೊಂಡ ನಿರ್ಮಾಣವನ್ನು ರೈತರೇ ಮಾಡಲು ತಾಂತ್ರಿಕ ಮಾಹಿತಿ ನೀಡುವುದು. ರೈತರು ಕೃಷಿ ಹೊಂಡ ನಿರ್ಮಾಣ ಮಾಡಿದ ನಂತರ ಇಲಾಖೆಯ ನಿಯಮಾನುಸಾರ ತಪಾಸಣೆ ನಡೆಸಿ, ಜಲಾನಯನ ಇಲಾಖೆ Schedule of Rates ಅನ್ವಯ ಬಿಲ್ಲು ತಯಾರಿಸಿ, ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿಯಂತೆ ಶೇಕಡ 80 (ಸಾಮಾನ್ಯ ವರ್ಗದ ರೈತರಿಗೆ) ಅಥವಾ ಶೇಕಡ 90 (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ) ಸಹಾಯಧನ ಪಾವತಿಸುವುದು.
2. ವಿವಿಧ ಗಾತ್ರದ ಹೊಂಡಗಳ ಸೂಚಿತ ದರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಜಲಾನಯನ ಇಲಾಖೆ Schedule of Rates ಪರಿಷ್ಕರಣೆಯಾದಲ್ಲಿ ಪರಿಷ್ಕೃತ ದರಗಳನ್ನು ಅನುಸರಿಸುವುದು.
3. ಪಾಲಿಥೀನ್ ಹೊದಿಕೆ: "IS 15351 2008 standard HDPE woven , geomembrane of 300 micron" ಅನ್ನು ಹೊದಿಕೆಗಾಗಿ ಬಳಕೆ ಮಾಡುವುದು.
4. ಮೇಲೆ ತಿಳಿಸಿರುವ ಪಾಲಿಥೀನ್ ಹೊದಿಕೆಯ ದರವು (ಅಳವಡಿಕೆ ವೆಚ್ಚ ಸೇರಿದಂತೆ ) ಪ್ರತಿ ಚದರ ಮೀಟರ್‌ಗೆ ರೂ 93 (ರೂ ತೊಂಬತ್ತಮೂರು ಮಾತ್ರ). ರೈತರು ಪಾಲಿಥೀನ್ ಅಳವಡಿಸಿದ ನಂತರ ಇಲಾಖೆಯ ನಿಯಮಾನುಸಾರ ತಪಾಸಣೆ ನಡೆಸಿ, ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿಯಂತೆ ಶೇಕಡ 80 (ಸಾಮಾನ್ಯ ವರ್ಗದ ರೈತರಿಗೆ) ಅಥವಾ ಶೇಕಡ 90(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ) ಸಹಾಯಧನ ಪಾವತಿಸುವುದು.

18/12/2014
ಕೃಷಿ ನಿರ್ದೇಶಕರು

ಇವರಿಗೆ ಸೂಕ್ತ ಕ್ರಮಕ್ಕಾಗಿ,
ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(23 ಜಿಲ್ಲೆಗಳು) ಇವರಿಗೆ ರವಾನಿಸುತ್ತಾ ಕ್ರಮ ಕೈಗೊಳ್ಳಲು ಸೂಚಿಸಿದೆ.
ಪ್ರತಿಯನ್ನು,
23 ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಇವರಿಗೆ ಮಾಹಿತಿಗಾಗಿ